# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.154/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 23.3.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸ. ನಂ: 193ರಲ್ಲಿ ಸರ್ಕಾರದಿಂದ ದೂರುದಾರರ ತಂದೆ ಮುನಿದೊಡ್ಡಪ್ಪ ತಂದೆ ಮುನಿವೆಂಕಟಪ್ಪ ಅವರಿಗೆ ಮಂಜೂರಾಗಿದ್ದ 30 ಗುಂಟೆ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾಂಗಣಕ್ಕೆ ಸ್ವಾಧೀನಪಡಿಸಿಕೊಂಡಿರುವುದರಿಂದ ಸದರಿ ಜಮೀನಿಗೆ ಪರಿಹಾರಧನವನ್ನು ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು **ಕೋರಿ.**

*******

**ಶ್ರೀ ಪ್ರಕಾಶ್, ಮರಲುಬಾಗಿಲು, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. ವೆಂಕಟರಾಜು, ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.**

2. ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸ. ನಂ: 193 ಕ್ಷೇತ್ರ 30 ಗುಂಟೆ ಜಮೀನು ಸರ್ಕಾರದಿಂದ ದೂರುದಾರರ ತಂದೆ ಮುನಿದೊಡ್ಡಪ್ಪ ತಂದೆ ಮುನಿವೆಂಕಟಪ್ಪ ಅವರಿಗೆ ಮಂಜೂರಾಗಿದ್ದು ಇರುತ್ತದೆ. ಆದರೆ ಈ ಜಮೀನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾಂಗಣಕ್ಕೆ ಸ್ವಾಧೀನಪಡಿಸಿಕೊಂಡು ದೂರುದಾರರಿಗೆ ಬದಲಿ ಜಮೀನು ನೀಡುವುದಾಗಿ ಸರ್ಕಾರದವರು ಹೇಳಿ ನಂತರ ಯಾವುದೇ ಬದಲಿ ನಿವೇಶನ ನೀಡಿರುವುದಿಲ್ಲವೆಂದು ದೂರು ನೀಡಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಈ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು ಕ್ರೀಡಾಂಗಣಕ್ಕೆ ಮಂಜೂರು ಮಾಡಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 33 ಎಲ್‌ಜಿಪಿ 2007 ದಿ:25.1.2008ರಂತೆ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಿಂದ 25 ಕಿ.ಮೀ. ಪರಿಧಿಯೊಳಗೆ ಮಂಜೂರು ಮಾಡಲು ರಹಾ ಇರುವುದಿಲ್ಲ. ಸರ್ಕಾರಿ ಸುತ್ತೋಲೆ ಆರ್‌ಡಿ 83 ಎಲ್‌ಜಿಪಿ 2006 ದಿ.5.1.2007 ಹಾಗೂ ಆರ್.ಡಿ.168 ಎಲ್‌ಜಿಪಿ 2014 ದಿ.9.6.2014ರಂತೆ ಪರಿಷ್ಕೃತ ಸೂಚನೆಗಳನ್ನು ನೀಡಿರುತ್ತಾರೆ. ಆದ್ದರಿಂದ ದೂರುದಾರರಿಗೆ ಸಾಗುವಳಿ ಚೀಟಿ ನೀಡಲು ರಹಾ ಇರುವುದಿಲ್ಲ, ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದಿನಾಂಕ: 15-2-2014 ರಂದು ಆಗಿನ ದೇವನಹಳ್ಳಿ ತಹಶೀಲ್ದಾರರು ದೂರುದಾರರ ಸರ್ವೆ ನಂ.193 ರಲ್ಲಿ 30 ಗುಂಟೆ ಜಮೀನನ್ನು ಕ್ರಿಡಾಂಗಣಕ್ಕೆ ಪಡೆದುಕೊಳ್ಳಲಾಗಿತ್ತು. ಅದರ ಬಗ್ಗೆ ಬದಲಿ ಜಮೀನನ್ನು ಅವರಿಗೆ ನೀಡಬೇಕಾಗಿತ್ತು ಎಂದು ತಿಳಿಸಿದ್ದಾರೆ. ಆ ವೇಳೆಯಲ್ಲಿ ಬದಲಿ ಜಮೀನಿನ ಲಭ್ಯತೆಯ ಬಗ್ಗೆ ಗ್ರಾಮಲೆಕ್ಕಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಮೋಜನಿದಾರರು, ಈ ಬಗ್ಗೆ ಸ್ಥಳ ಪರಿಶೀಲಿಸಿ, ಯಾವುದೇ ಬದಲಿ ಜಮೀನು ಇರುವುದಿಲ್ಲವೆಂದು ಎದರುದಾರರಿಗೆ ವರದಿಯನ್ನು ನೀಡಿರುತ್ತಾರೆ. ಆದ್ದರಿಂದ ದೂರುದಾರರಿಗೆ ಸರ್ವೆ ನಂ.193 ರಲ್ಲಿ 30 ಗುಂಟೆ ಜಮೀನು ಮಂಜೂರು ಆಗಿದ್ದು, ಅದನ್ನು ಕ್ರಿಡಾಂಗಣಕ್ಕೆ ಪಡೆದುಕೊಳ್ಳಲಾಗಿದೆ ಎನ್ನುವುದನ್ನು ಆಗಿನ ತಹಶೀಲ್ದಾರರು ಹಾಗೂ ಲಭ್ಯವಿದ್ದ ದಾಖಲೆಯಿಂದ ಕಂಡುಬರುತ್ತದೆ. ಆದರೆ, ಇಲ್ಲಿಯವರೆಗೆ ದೂರುದಾರರಿಗೆ ಬದಲಿ ನಿವೇಶನ ಅಥವಾ ಅದಕ್ಕೆ ಸಮನಾಗಿ ಪರಿಹಾರ ಧನ ನೀಡಿರುವುದಿಲ್ಲ.

6. ಆದರೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 33 ಎಲ್‌ಜಿಪಿ 2007 ದಿ:25.1.2008ರಂತೆ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಿಂದ 25 ಕಿ.ಮೀ. ಪರಿಧಿಯೊಳಗೆ ಮಂಜೂರು ಮಾಡಲು ರಹಾ ಇರುವುದಿಲ್ಲ. ಸರ್ಕಾರಿ ಸುತ್ತೋಲೆ ಆರ್‌ಡಿ 83 ಎಲ್‌ಜಿಪಿ 2006 ದಿ.5.1.2007 ಹಾಗೂ ಆರ್.ಡಿ.168 ಎಲ್‌ಜಿಪಿ 2014 ದಿ.9.6.2014ರಂತೆ ಪರಿಷ್ಕೃತ ಸೂಚನೆಗಳನ್ನು ನೀಡಿರುತ್ತಾರೆ. ಇವುಗಳ

ಮೇರೆಗೆ ಈ ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಜಾಗ ಮಂಜೂರುಮಾಡುವ ಅಧಿಕಾರ ಎದುರುದಾರರಿಗೆ ಇರುವುದಿಲ್ಲ.

7. ಆದರೆ ದೂರುದಾರರ ಜಮೀನನ್ನು 1998–99ರಂದೇ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಆಗಲೇ ಬದಲಿ ನಿವೇಶನ ನೀಡಿದ್ದರೆ ಸರ್ಕಾರದ ಸುತ್ತೋಲೆಗಳು ಅನ್ವಯಿಸುತ್ತಿರಲಿಲ್ಲ. ಈಗ ತುಂಬಾ ವಿಳಂಬವಾಗಿರುವುದರಿಂದ ಸರ್ಕಾರಿ ಸುತ್ತೋಲೆಗಳು ಅನ್ವಯಿಸುತ್ತಿದ್ದು, ಆದರೆ ಅದೊಂದೇ ಕಾರಣಕ್ಕೆ ದೂರುದಾಂರ ಮನವಿ ತಿರಸ್ಕರಿಸಿದರೆ ಅವರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಸರ್ಕಾರದಿಂದ ದೂರುದಾರರಿಗೆ ಬದಲಿ ನಿವೇಶನ ನೀಡಲು ಸುತ್ತೋಲೆಗಳು ಅಡ್ಡಿಯಾದರೆ ಅವರಿಗೆ ಸೂಕ್ತ ಪರಿಹಾರ ಧನವನ್ನಾದರೂ ನೀಡಿದರೆ ನ್ಯಾಯದೊರಕಿದಂತಾಗುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸ. ನಂ: 193 ಕ್ಷೇತ್ರ 30 ಗುಂಟೆ ಜಮೀನು ಸರ್ಕಾರದಿಂದ ದೂರುದಾರರ ತಂದೆ ಮುನಿದೊಡ್ಡಪ್ಪ ತಂದೆ ಮುನಿವೆಂಕಟಪ್ಪ ಅವರಿಗೆ ಮಂಜೂರಾಗಿದ್ದು ಸದರಿ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾಂಗಣಕ್ಕೆ ಸ್ವಾಧೀನಪಡಿಸಿಕೊಂಡಿರುವುದರಿಂದ ಸದರಿ ಜಮೀನಿಗೆ ಪರಿಹಾರಧನವನ್ನು ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 23/3/12.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.